**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10045/2025**

ಪಿಡಬ್ಲೂ– 6

ಸಿಡಬ್ಲೂ– 6

| | | |
|---|---|---|
| ಸಾಕ್ಷಿ ಹೆಸರು | – | ಗಂಗಾಧರ |
| ತಂದೆ ಹೆಸರು | – | ಈಶ್ವರಪ್ಪ |
| ವಯಸ್ಸು | – | 53 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸಃ | – | ಕಣ್ಣೂರು ಗ್ರಾಮ, ಸೊರಬ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 12–06–2026.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ7 ಹರೀಶ ಗೊತ್ತು. ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆ ಮಾಡಿರುವ ಬಗ್ಗೆ ಗೊತ್ತು. ಸುಮಾರು ಒಂದುವರೆ ವರ್ಷದ ಹಿಂದೆ ನಾನು ನನ್ನ ಜಮೀನಿನ ಹತ್ತಿರ ಕೆಲಸ ಮಾಡುತ್ತಿದ್ದಾಗ ಪೋಲೀಸರು ನನ್ನನ್ನು ಕರೆದು ಒಂದು ಪೋಟೋವನ್ನು ತೆಗೆದುಕೊಂಡಿರುತ್ತಾರೆ. ನಂತರ ನನ್ನನ್ನು ಪೋಲೀಸ್ ಠಾಣೆಗೆ ಕರೆಸಿ ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ.

ಈಗ ತೋರಿಸಿದ ಫೋಟೋ ತೆಗೆಸುವಾಗ ನಾನು ಮತ್ತು ಹರೀಶ ಇದ್ದೆವು. ಆ ಸಮಯದಲ್ಲಿ ಆರೋಪಿ ಎಲ್ಲಿದ್ದ ಎಂದು ಗೊತ್ತಿಲ್ಲ. ಪೋಲೀಸರು ಯಾವ ವಿಚಾರಕ್ಕೆ ಫೋಟೋ ತೆಗೆದರು ಎಂದು ಗೊತ್ತಿಲ್ಲ. ಪೋಲೀಸರು ಸ್ಥಳದಲ್ಲಿ ಏನು ಮಾಡಿದರು ಮತ್ತು ಯಾವ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ಮು ಮಾ 1 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಈಗ ತೋರಿಸಿದ ಮುದ್ದೆ ಮಾಲು 1 ಅನ್ನು ನಾನು ನೋಡಿರುವುದಿಲ್ಲ. ಅದು ಸ್ಥಳದಲ್ಲಿ ಎಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಸ್ಥಳಕ್ಕೆ ಬರಬೇಕು ಎಂದು ನನಗೆ ಯಾವುದೇ ನೋಟೀಸ್ ಅನ್ನು ಜಾರಿ ಮಾಡಿರುವುದಿಲ್ಲ. ಈಗ ತೋರಿಸಿದ ನೋಟೀಸ್ ನಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್ ನ್ನು ನಿಪಿ -6 ಎಂದು , ಸಾಕ್ಷಿಯ ಸಹಿಯನ್ನು ನಿಪಿ 6-(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸ್ಥಳ ಪಂಚನಾಮೆ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸ್ಥಳ ಪಂಚನಾಮೆಯನ್ನು ನಿಪಿ -7 ಎಂದು , ಸಾಕ್ಷಿಯ ಸಹಿಯನ್ನು ನಿಪಿ 7-(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ 4 ಫೋಟೋಗಳಲ್ಲಿ ನಾನು ಇರುತ್ತೇನೆ. ಸದರಿ ಫೋಟೋಗಳನ್ನು ನಿಪಿ 5 ರಿಂದ 11 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ಕೈ ಮಾಡಿ ತೋರಿಸುತ್ತಿರುವ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ 7 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲೀಸರು ಸಹಿ ಮಾಡು ಎಂದು

ಹೇಳಿದ್ದರಿಂದ ನಾನು ಸಹಿ ಹಾಕಿರುತ್ತೇನೆ. ಪೋಲೀಸರು ಯಾವ ವಿಚಾರಕ್ಕೆ ಸ್ಥಳ ಪಂಚನಾಮೆಯನ್ನು ಮತ್ತು ಫೋಟೋಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿನಾಂಕಃ 28-06-2025 ರಂದು ಸ್ಥಳ ಪಂಚನಾಮೆ ಮಾಡುವ ಸಂಬಂಧ ಪೋಲೀಸರು ನನಗೆ ನಿಪಿ -6 ರಂತೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಆ ದಿವಸ ಆರೋಪಿ ಧರ್ಮಾನಾಯ್ಕ ನಮ್ಮನ್ನು ಮತ್ತು ಪೋಲೀಸರನ್ನು ಸೊರಬ ತಾಲ್ಲೂಕು, ಕಾನಳ್ಳಿ - ಕಣ್ಣೂರು ಗ್ರಾಮ ಮುಖ್ಯ ರಸ್ತೆಯಲ್ಲಿರುವ ಕಾನಳ್ಳಿ ಗ್ರಾಮದ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿ, ಆ ಸ್ಥಳದಲ್ಲಿ ನಿನ್ನೆ ದಿನ ದಿನಾಂಕಃ 27-06-2025 ರಂದು ತನ್ನ ಮಗಳನ್ನು ಕರೆದುಕೊಂಡು ಹೋಗಿ ಹುರಿಯಿಂದ ಆಕೆಗೆ ಕುತ್ತಿಗೆಗೆ ಬಿಗಿದು ಕೊಲೆ ಮಾಡಲು ಪ್ರಯತ್ನಪಟ್ಟ ಸ್ಥಳ ಎಂದು ತೋರಿಸಿದನು ಎಂದರೆ ಸರಿಯಲ್ಲ. ನಂತರ ಅದೇ ಸ್ಥಳದಿಂದ 20 ಅಡಿ ದೂರದಲ್ಲಿ ಬಿದ್ದಿದ್ದ ಒಂದು ದಾರವನ್ನು ತೋರಿಸಿ ತನ್ನ ಮಗಳ ಕುತ್ತಿಗೆಗೆ ಇದೇ ದಾರದಿಂದ ಹಾಕಿ ಎಳೆದು ಸಾಯಿಸು ಪ್ರಯತ್ನಿಸಿದ್ದು

ಎಂದು ಹೇಳಿ ಆರೋಪಿ ಸದರಿ ದಾರವನ್ನು ಹಾಜರುಪಡಿಸಿದನು, ಆಗ ಪೋಲೀಸರು ಅದನ್ನು ಅಮಾನತ್ತುಪಡಿಸಿಕೊಂಡು ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಎಸ್ ಎಂಬ ಅಕ್ಷರದಿಂದ ಮೊಹರು ಮಾಡಿ ನಮ್ಮಗಳ ಸಹಿ ಇರುವ ಚೀಟಿ ಅಂಟಿಸಿ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ಆ ಬಗ್ಗೆ ನನ್ನ ಮತ್ತು ಚಾಸಾ7 ರವರ ಸಮಕ್ಷಮ ಮಧ್ಯಾಹ್ನ 1 ರಿಂದ 2 ಗಂಟೆ ವರೆಗೆ ನಿಪಿ 2 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ 8 ರಿಂದ 11 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಾಲ್ಕು ಫೋಟೋಗಳಲ್ಲಿ ಕೈ ಮಾಡಿ ತೋರಿಸುತ್ತಿರುವ ವ್ಯಕ್ತಿ ಆರೋಪಿಯಾಗಿರುತ್ತಾನೆ ಎಂದರೆ ಸರಿಯಲ್ಲ.

ನಿಪಿ 7 ಮಹಜರ್ ನಲ್ಲಿ ಬರೆದ ವಿಚಾರಗಳು ಗೊತ್ತಿದ್ದರೂ ಸಹ , ಪೋಲೀಸರು ಯಾವ ವಿಚಾರಕ್ಕೆ ಸದರಿ ಮಹಜರ್ ನ್ನು ಮಾಡಿದರು ಎಂದು ಗೊತ್ತಿದ್ದರೂ ಸಹ ಈಗ ಆರೋಪಿ ಜೊತೆ ಶಾಮೀಲಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಬಿ ಎನ್ ಪಿ ವಕೀಲರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).